ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1924/2019

ಚಾಸಾ: 7 ಪ್ರಾಸಾ: 6

ದಿನಾಂಕ: 03.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಉದಯ ಶಂಕರ |
| ತಂದೆಯ ಹೆಸರು | : | ಶೇಷಗಿರಿ ಹೆಬ್ಬಾರ್ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ವೈದ್ಯಾಧಿಕಾರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**</u>

ನಾನು 2002 ರಿಂದ ಇಲ್ಲಿಯವರೆಗೆ ಕುಂದಾಪುರದ ಸರಕಾರಿ ಆಸ್ಪತೆರಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 04-04-2019 ರಂದು ಬೆಳಗ್ಗೆ 10-20 ಗಂಟೆಗೆ ಚಾಸಾ-1ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಬೆನ್ನಿನ ಕೆಳ ಭಾಗದಲ್ಲಿ ನೋವು ಕಂಡು ಬಂದಿರುತ್ತದೆ.

ದಿ: 04-04-2019 ರಂದು ಬೆಳಗ್ಗೆ 10-35 ಗಂಟೆಗೆ ಚಾಸಾ-3ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಬೆನ್ನಿನ ಕೆಳ ಭಾಗದಲ್ಲಿ ನೋವು ಕಂಡು ಬಂದಿರುತ್ತದೆ.

ಈ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು, ತಾಜಾ ಗಾಯವಾಗಿರುತ್ತದೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿ ಸದ್ರಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ

ಗುರುತಿಸಿದ್ದು ಅವುಗಳನ್ನು ನಿಪಿ-5 ಮತ್ತು 6 ಎಂದು, ಅದರಲ್ಲಿನ ಸಾಕ್ಷಿ ಸಹಿಗಳನ್ನು ನಿಪಿ-5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ.ಆರ್.ಎನ್ ರವರಿಂದಃ</u>**

ಗಾಯಾಳುಗಳಿಗೆ ಕಣ್ಣಿಗೆ ತೋರುವಂತಹ ಗಾಯಗಳು ಇರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ವಯಸ್ಸಾದ ನಂತರ ದೈನಂದಿನ ಕೆಲಸಗಳಲ್ಲಿ ಅಂತಹ ನೋವುಗಳು ಕಂಡು ಬರುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಪ್ರಾಯಸ್ತರಾದ ಕಾರಣ ನೋವು ಇದೆ ಎಂದು ಸೃಷ್ಟಿಸಿದ್ದರೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**